**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.**

ದಿನಾಂಕಃ **9** ನೇ ದಿವಸ ಮಾರ್ಚ್ ತಿಂಗಳು **2026** ನೇ ಇಸವಿ.

**ಕ್ರಿಮಿನಲ್ ಮೊಕದ್ದಮೆ ಕ್ರಮಾಂಕಃ 339/2023**

ರಾಜ್ಯ ಸರ್ಕಾರದ ಪರವಾಗಿ,
ಠಾಣಾಧಿಕಾರಿ,
ಕಾರ್ಕಳ ನಗರ ಪೋಲಿಸು ಠಾಣೆ,
ಉಡುಪಿ ಜಿಲ್ಲೆ. .... ಪಿರ್ಯಾದುದಾರರು.

ವಿರುದ್ಧ -

ಆರ್ಶಿತ್ ಅವಿನಾಶ ದೋಡ್ರೆ @ ಹರ್ಷದ್,
ಪ್ರಾಯಃ 21 ವರ್ಷ,
ತಂದೆಃ ದಿ. ಜುನಲ್ ಮನ್ಮಸಿ ದೋಡ್ರೆ @ ಹಮೀದ್,
ವಾಸಃ ಎಲ್.ಐ.ಜಿ. ಅರ್ಪಾಟಮೆಂಟ್ ಸಿ 43,
ವ್ಯಾಸ ನಗರಿ ಎಂಎಪಿಎಸ್ ಕಾಲೇಜು,
ಕೆ.ಪಿ.ಟಿ. ಮಂಗಳೂರು, ದ. ಕ ಜಿಲ್ಲೆ. ... ಆರೋಪಿ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರನ್ವಯ ಆರೋಪಿತರ ಹೇಳಿಕೆಃ**

**ಪ್ರಶ್ನೆಃ 1ಃ-** ನ್ಯಾಯಾಲಯದಲ್ಲಿ ವಿಚಾರಣೆ ಮಾಡಿದ ಸಾಕ್ಷಿಗಳ ಹೇಳಿಕೆಗಳನ್ನು ಕೇಳಿದ್ದೀರಾ?

**ಉತ್ತರಃ-** ಆರೋಪಿಃ

**ಪ್ರಶ್ನೆ 2ಃ- ಪಿಡಬ್ಲ್ಯೂ -1 ಗಣೇಶ್ ಆಚಾರ್ಯ ರವರು ತಮ್ಮ ಸಾಕ್ಷ್ಯದಲ್ಲಿ,** ತಾನು ಎರ್ಲಪ್ಪಾಡಿ ಗ್ರಾಮದ ಜಾರ್ಕಳದಲ್ಲಿರುವ ಕಾಳಿಕಾಂಬ ಜ್ಯುವಲರಿ ಅಂಗಡಿಯ ಮಾಲೀಕನಾಗಿದ್ದು ಅಂಗಡಿಯನ್ನು ನಾನು ಒಬ್ಬನೇ ನಡೆಸುತ್ತಿದ್ದೇನೆ. ದಿಃ 01-10-2022 ರಂದು ನಾನು ನನ್ನ ಅಂಗಡಿಯ ಬಾಗಿಲು ಮುಚ್ಚಿ ಮನೆಗೆ ತೆರಳಿರುತ್ತೇನೆ. ಮರುದಿನ ಬೆಳಿಗ್ಗೆ 8.00 ಗಂಟೆಗೆ ಬಂದು ನೋಡಲಾಗಿ ಅಂಗಡಿಯ ಬಾಗಿಲು ತೆರೆದಿರುತ್ತದೆ. ನಂತರ ನಾನು ಅನುಮಾನಗೊಂಡು ಒಳಗೆ ಹೋಗಿ ನೋಡಲಾಗಿ ಮೂರು ಮೂಗಿನ ಬೊಟ್ಟು, 20 ಚಿನ್ನದ ಸಣ್ಣ ಗುಂಡು, ಮೂರು ಬೆಂಡೋಲೆ ಕಳುವಾಗಿರುವುದು ಕಂಡು ಬಂದಿರುತ್ತದೆ.

ನಂತರ ನಾನು ಸದರಿ ಮಾಹಿತಿಯನ್ನು ಠಾಣೆಗೆ ತಿಳಿಸಿ ದೂರು ದಾಖಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನಾದರೂ ಹೇಳಲು ಇಚ್ಛಿಸುವಿರಾ?

**ಉತ್ತರಃ-** ಆರೋಪಿಃ

**ಪ್ರಶ್ನೆ 3ಃ- ಪಿಡಬ್ಲ್ಯೂ -2 ರೂಪ ಶೆಟ್ಟಿ ರವರು ತಮ್ಮ ಸಾಕ್ಷ್ಯದಲ್ಲಿ,** ಪ್ರಶ್ನಿತ ತಕ್ಷೀರು ಆಗಿದೆ ಎಂದು ಹೇಳುವ ಒಂದು ತಿಂಗಳ ಪೂರ್ವದಲ್ಲಿ ನಾನು ನನ್ನ ಮಕ್ಕಳ 3 ಜೊತೆ ಬೆಂಡೋಲೆಯನ್ನು ರಿಪೇರಿಗಾಗಿ ಚಾಸಾ 1 ರವರು ನಡೆಸುತ್ತಿದ್ದ ಅಂಗಡಿ ಕಾಳಿಕಾಂಬ ಜ್ಯುವಲರ್ಸ್‌ಗೆ ನೀಡಿರುತ್ತೇನೆ. ತರುವಾಯ ನಮ್ಮ ಒಲೆಯನ್ನು ತರಲು ಅಂಗಡಿಗೆ ಹೋದಾಗ ಸದರಿ ಕಾಳಿಕಾಂಬ ಜ್ಯುವಲರ್ಸ್ ನಲ್ಲಿ ಯಾರೋ ಕಳ್ಳತನ ಮಾಡಿದ್ದು ಹಾಗೂ ನಾನು ರಿಪೇರಿಗಾಗಿ ಕೊಟ್ಟಿದ್ದ ನಮ್ಮ ಬೆಂಡೋಲೆಗಳನ್ನು ಕೂಡ ಕಳ್ಳತನ ಆಗಿರುವುದಾಗಿ ಚಾಸಾ 1 ರವರು ತಿಳಿಸಿರುತ್ತಾರೆ. ಅಲ್ಲದೇ ಘಟನೆ ಕುರಿತು ಪೋಲಸರಿಗೆ ಚಾಸಾ 1 ರವರು ದೂರು ಕೊಟ್ಟಿರುವ ವಿಚಾರ ನನಗೆ ತಿಳಿದಿರುತ್ತದೆ. ಈ ಪ್ರಕರಣ ಕುರಿತಂತೆ ನಾನು ಪೋಲಿಸರಿಗೆ ಹೇಳಿಕೆ ಹಾಗೂ ಮರಹೇಳಿಕೆಯನ್ನು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನಾದರೂ ಹೇಳಲು ಇಚ್ಛಿಸುವಿರಾ?

**ಉತ್ತರಃ-** ಆರೋಪಿಃ

**ಪ್ರಶ್ನೆ 4ಃ- ಪಿಡಬ್ಲ್ಯೂ -3 ಶುಶಾಂತ್ ಮತ್ತು ಪಿಡಬ್ಲ್ಯೂ -4 ಅಜಯ್ ಆಚಾರ್ಯ ರವರು ತಮ್ಮ ಸಾಕ್ಷ್ಯದಲ್ಲಿ,** ಜಾರ್ಕಳದಲ್ಲಿರುವ ಕಾಳಿಕಾಂಬ ಜ್ಯುವಲರ್ಸ ಕಳ್ಳತನವಾದಾಗ ಪೋಲಿಸರು ಮಹಜರಿಗೆ ಬಂದಾಗ ಸಹಿ ಮಾಡಿರುತ್ತೇನೆ. ಪೋಲಿಸರು ಮಹಜರು ಮಾಡಿ ಕಬ್ಬಿಣ್ಣದ ಕಟ್ಟರ್ ಅನ್ನು ವಶಪಡಿಸಿಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನಾದರೂ ಹೇಳಲು ಇಚ್ಛಿಸುವಿರಾ?

**ಉತ್ತರಃ-** ಆರೋಪಿಃ

**ಪ್ರಶ್ನೆ 5ಃ- ಪಿಡಬ್ಲ್ಯೂ-5 ಮೊಹಮ್ಮದ್ ಮುಸ್ತಾಫ್ ರವರು ತಮ್ಮ ಸಾಕ್ಷ್ಯದಲ್ಲಿ,** ದಿಃ 20-12-2022 ರಂದು ಪೋಲಿಸರು ಆಪಾದಿತ ತೋರಿಸಿಕೊಟ್ಟಂತೆ ನನ್ನ ಸಮಕ್ಷಮ ಮಾಡಿದ ಘಟನಾ ಸ್ಥಳ ಹಾಗೂ ಸ್ವತ್ತು ಸ್ವಾಧೀನತಾ ಮಹಜರು ಸಮಯದಲ್ಲಿ ಮಾಡಿದ್ದು ನನ್ನ ಸಮಕ್ಷಮ 2 ಬೀಗಗಳನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನಾದರೂ ಹೇಳಲು ಇಚ್ಛಿಸುವಿರಾ?

**ಉತ್ತರಃ-** ಆರೋಪಿಃ

**ಪ್ರಶ್ನೆ 6ಃ- ಪಿಡಬ್ಲ್ಯೂ-6 ಪ್ರತಾಪ್ ಚಂದ್ರ ಶೆಟ್ಟಿ ರವರು ತಮ್ಮ ಸಾಕ್ಷ್ಯದಲ್ಲಿ,** ಕಾರ್ಕಳ ನಗರ ಠಾಣೆ ಠಾಣಾಧಿಕಾರಿಯವರ ಕೋರಿಕೆಯ ಮೇರೆಗೆ ದಿಃ 26-12-2022 ರಂದು ಕಾರ್ಕಳ ತಾಲೂಕು ಎರ್ಲಪ್ಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಎರ್ಲಪ್ಪಾಡಿ ಗ್ರಾಮದ ಜಾರ್ಕಳ ಶ್ರೀ ಕಾಳಿಕಾಂಬ ಜುವೆಲ್ಲರಿ ವರ್ಕ್ಸ್ ಕಟ್ಟಡ ನಂಬರ್ 4-191 ಸುಜಾತ ಕೋಂ ವಿಠಲ ಮೂಲ್ಯ ಇವರ ಹೆಸರಿನಲ್ಲಿರುತ್ತದೆ ಎಂದು ದೃಢೀಕರಣ ಪತ್ರವನ್ನು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನಾದರೂ ಹೇಳಲು ಇಚ್ಛಿಸುವಿರಾ?

**ಉತ್ತರಃ-** ಆರೋಪಿಃ

**ಪ್ರಶ್ನೆ 7ಃ- ಪಿಡಬ್ಲ್ಯೂ-7 ಸದಾಶಿವ ಶೆಟ್ಟಿ ರವರು ತಮ್ಮ ಸಾಕ್ಷ್ಯದಲ್ಲಿ,** ದಿಃ02.10.2022 ರಂದು ಹಗಲು ಠಾಣಾ ಪ್ರಭಾರ ಕರ್ತವ್ಯದಲ್ಲಿರುವಾಗ ಬೆಳಿಗ್ಗೆ 10.30 ಗಂಟೆಗೆ ಚಾಸಾ-12 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಕ್ರಮಾಂಕ ಸಂಃ 128/22 ಕಲಂ 380, 454, 457 ಐಪಿಸಿ ರಡಿ ಪ್ರಕರಣ ದಾಖಲಿಸಿ ಪ್ರ ವ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಪ್ರಕರಣದ ಮುಂದಿನ ತನಿಖೆಗೆ ಚಾಸಾ 16 ರವರಿಗೆ ವಹಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನಾದರೂ ಹೇಳಲು ಇಚ್ಛಿಸುವಿರಾ?

**ಉತ್ತರಃ-** ಆರೋಪಿಃ

**ಪ್ರಶ್ನೆ 8ಃ- ಪಿಡಬ್ಲ್ಯೂ-8 ಲಕ್ಷ್ಮಿ ರವರು ತಮ್ಮ ಸಾಕ್ಷ್ಯದಲ್ಲಿ,** ತಕ್ಷೀರು ಸ್ಥಳ ಮಹಜರು ಹಾಗೂ ಆರೋಪಿ ತೋರಿಸಿಕೊಟ್ಟಂತೆ ಘಟನ ಸ್ಥಳ ಹಾಗೂ ಸ್ವತ್ತು ಸ್ವಾಧೀನತಾ ಮಹಜರು ಸಮಯದಲ್ಲಿ ಹಾಜರಿದ್ದು ನನ್ನ ಮೊಬೈಲ್ ಮೂಲಕ ಭಾವಚಿತ್ರ ತೆಗೆದ ಬಗ್ಗೆ ಕಲಂ 65(ಬಿ) ಭಾರತೀಯ ಸಾಕ್ಷ್ಯ ಅಧಿನಿಯಮದಡಿ ಪ್ರಮಾಣಪತ್ರವನ್ನು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನಾದರೂ ಹೇಳಲು ಇಚ್ಛಿಸುವಿರಾ?

**ಉತ್ತರಃ-** ಆರೋಪಿಃ

**ಪ್ರಶ್ನೆ 9ಃ- ಪಿಡಬ್ಲ್ಯೂ-9 ದಾಮೋದರ ಕೆ.ಬಿ, ರವರು ತಮ್ಮ ಸಾಕ್ಷ್ಯದಲ್ಲಿ,** ದಿಃ 02.10.2022 ರಂದು ಎರ್ಲಪಾಡಿ ಗ್ರಾಮದ ಜಾರ್ಕಳ ಜಂಕ್ಷನ್ ನಲ್ಲಿ ಕಾಳಿಕಾಂಭ ಜ್ಯುವೆಲ್ಲರ್ಸ್ ಎಂಬಲ್ಲಿಂದ ಬಂದ ಮಾಹಿತಿ ಆಧಾರದಲ್ಲಿ ಸ್ಥಳಕ್ಕೆ ಹೋಗಿ ಪಿರ್ಯಾದಿದಾರರಾದ ಗಣೇಶ್ ಅಚಾರ್ಯ ಎಂಬುವವರ ಲಿಖಿತ ಪಿರ್ಯಾದನ್ನು ಸ್ವೀಕರಿಸಿ ಪ್ರಕರಣ ದಾಖಲಿಸುವಂತೆ ಪಿಸಿ 16 ಸಿದ್ದರಾಯಪ್ಪ ರವರ ಮುಖಾಂತರ ಠಾಣೆಗೆ ಕಳುಹಿಸಿಕೊಟ್ಟು ಠಾಣ ಹೆಚ್ ಸಿ 2050 ರವರಲ್ಲಿ ಸದಾಶಿವ ಶೆಟ್ಟಿ ಎಂಬವರಲ್ಲಿ ಪ್ರಕರಣ ದಾಖಲಿಸುವಂತೆ ತಿಳಿಸಿರುತ್ತೇನೆ. ನಂತರ ಘಟನಾ ಸ್ಥಳದ ಮಹಜರನ್ನು ಸಾಕ್ಷಿದಾರರಾದ ಚಾಸಾ-8 ಮತ್ತು 9 ರವರ ಸಮಕ್ಷಮ ತಯಾರಿಸಿ ಘಟನಾ ಸ್ಥಳದಲ್ಲಿ ಬಿಟ್ಟು ಹೋಗಿದ್ದ ಕಬ್ಬಿಣದ ಕಟ್ಟರ್ ಸ್ವಾಧೀನಪಡಿಸಿಕೊಂಡು ಘಟನಾ ಸ್ಥಳದ ಮತ್ತು ಸ್ವತ್ತಿನ ಛಾಯಚಿತ್ರ ತೆಗೆದು ನಂತರ ಚಾಸಾ-3 ರಿಂದ 5 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿಃ04.10.2022 ರಂದು ಚಾಸಾ-2 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ದಿಃ08.12.2022 ರಂದು ಉಡುಪಿ ಪ್ರಕರಣ ಕ್ರಮಾಂಕ 170/22 ರಲ್ಲಿ ಆರೋಪಿಯಾಗಿರುವ ಅವಿನಾಶ್ ಡೊಗ್ರೆ ಎಂಬುವವರನ್ನು ಬಾಡಿ ವಾರಂಟ್ ವರದಿ ಹೊರಡಿಸಬೇಕಾಗಿ ಮಾನ್ಯ ನ್ಯಾಯಾಲಯಕ್ಕೆ ಮನವಿ ಪತ್ರ ಕಳುಹಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನಾದರೂ ಹೇಳಲು ಇಚ್ಛಿಸುವಿರಾ?

**ಉತ್ತರಃ-** ಆರೋಪಿಃ

**ಪ್ರಶ್ನೆ 10ಃ- ಪಿಡಬ್ಲ್ಯೂ-9 ದಾಮೋದರ ಕೆ.ಬಿ, ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ,** ದಿಃ10.12.2022 ರಂದು ಎರ್ಲಾಪಾಡಿ ಗ್ರಾಮ ಪಂಚಾಯತ್ ಗೆ ಘಟನಾ ಸ್ಥಳ ಯಾರಿಗೆ ಸೇರಿದ ಎಂಬ ಬಗ್ಗೆ ಮನವಿ ಪತ್ರ ಸಲ್ಲಿಸಿರುತ್ತೇನೆ. ದಿಃ20.12.2022 ರಂದು ಮಾನ್ಯ ನ್ಯಾಯಾಲಯದಿಂದ ಬಾಡಿ ವಾರಂಟ್ ನಲ್ಲಿ ಆರೋಪಿಯನ್ನು ಅಭಿರಕ್ಷೆಯಲ್ಲಿ ಕರೆದುಕೊಂಡು ಸದ್ರಿಯವರ ಸ್ವಃಇಚ್ಛಾ ಹೇಳಿಕೆ ಪಡೆದುಕೊಂಡು ಆರೋಪಿ ತೋರಿಸಿದಂತೆ ಪಂಚರಾದ ಚಾಸಾ-10 ಮತ್ತು 11 ರವರ ಸಮಕ್ಷಮ ಮಹಜರು ಬರೆದು ಸದ್ರಿ ಸ್ಥಳದಲ್ಲಿ ಆರೋಪಿ ತೋರಿಸಿಕೊಟ್ಟ ಜಖಂಗೊಂಡ 2 ಬೀಗವನ್ನು ಸ್ವಾಧೀನಪಡಿಸಿಕೊಂಡು ನಂತರ ಠಾಣೆಗೆ ಬಂದು ಸ್ವತ್ತು ಪಟ್ಟಿ ನಂ. 213/22 ರಂತೆ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಆರೋಪಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಿಃ21.12.2022 ರಂದು ಪ್ರಾದೇಶಿಕ ಸಾರಿಗೆ ಅಧಿಕಾರಿಯವರಿಗೆ ಆರೋಪಿಯ ಕೃತ್ಯಕ್ಕೆ ಬಳಸಿದ ಕೆಎ-20-ಇಕೆ -3084 ನ್ನು ಆ್ಯಕ್ಟಿವಾ ಸ್ಕೂಟರ್ ನ ಬಿ ಎಕ್ಸ್ ಟ್ರಾಕ್ಟ್ ನೀಡುವಂತೆ ಮನವಿ ಸಲ್ಲಿಸಿರುತ್ತೇನೆ. ದಿಃ 04.01.2023 ರಂದು ಸದ್ರಿ ಸ್ಕೂಟರಿನ ಮಾಲೀಕರಿಗೆ ನೋಟಿಸು ಜಾರಿ ಮಾಡಿರುತ್ತೇನೆ. ನಂತರ ಚಾಸಾ-7 ರವರ ಹೇಳಿಕೆ ಪಡೆದಿರುತ್ತೇನೆ. ದಿಃ12.01.2023 ರಂದು ಎರ್ಲಾಪಾಡಿ ಗ್ರಾಮ ಪಂಚಾಯತ್ ನಿಂದ ನೀಡಿದ ದೃಡಪತ್ರವನ್ನು ಪಡೆದುಕೊಂಡಿರುತ್ತೇನೆ. ನಂತರ ಕೆಎ-20-ಇಕೆ-3084 ಸ್ಕೂಟರಿನ ಬಿ ಎಕ್ಸ್ ಟ್ರಾಕ್ಟ್ ನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿ ಉಡುಪಿ ರವರಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನಾದರೂ ಹೇಳಲು ಇಚ್ಛಿಸುವಿರಾ**?**

**ಉತ್ತರಃ-** ಆರೋಪಿಃ

**ಪ್ರಶ್ನೆ 11ಃ- ಪಿಡಬ್ಲ್ಯೂ-11 ಕಲೈಮಾರ್ ಪಿ. ರವರು ತಮ್ಮ ಸಾಕ್ಷ್ಯದಲ್ಲಿ,** ದಿಃ 12-02-2023 ರಂದು ಚಾಸಾ-16 ರವರಿಂದ ಕಡತವನ್ನು ಸ್ವೀಕರಿಸಿರುತ್ತೇನೆ. ಅದೇ ದಿನ ಪ್ರಕರಣದ ಎಲ್ಲಾ ದಾಖಲೆಗಳ ಪರಿಶೀಲನೆ ನಡೆಸಿ, ಆರೋಪಿಯ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನಾದರೂ ಹೇಳಲು ಇಚ್ಛಿಸುವಿರಾ**?**

**ಉತ್ತರಃ-** ಆರೋಪಿಃ

**ಪ್ರಶ್ನೆ 12ಃ- ಈ ಮೊಕದ್ದಮೆಯ ಬಗ್ಗೆ ನಿಮಗೆ ಇನ್ನು ಏನಾದರೂ ಹೇಳುವುದು ಇದೆಯೇ?**

**ಉತ್ತರಃ-** ಆರೋಪಿಃ

**ಪ್ರಶ್ನೆ 13ಃ ನಿಮ್ಮ ಪರವಾಗಿ ಪ್ರತಿರಕ್ಷೆ ಸಾಕ್ಷ್ಯ ಇದೆಯೇ?**

**ಉತ್ತರಃ-** ಆರೋಪಿಃ

**(ಆರೋಪಿತರಿಗೆ ಮೇಲಿನ ಹೇಳಿಕೆಯನ್ನು ಓದಿ ಹೇಳಿದ್ದು, ಅವರು ಅದನ್ನು ಸರಿಯಾಗಿ ತಿಳಿದುಕೊಂಡು ಉತ್ತರಿಸಿದ್ದಾರೆ ಎಂಬುದಾಗಿ ಈ ಮೂಲಕ ದೃಢೀಕರಿಸುತ್ತೇನೆ.)**

ಪ್ರ.ಸಿ.ನ್ಯಾ. ಮತ್ತು ಪ್ರ.ದ.ನ್ಯಾ.ದಂ.,
ಕಾರ್ಕಳ